# ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

## ಸಿ.ಸಿ. ನಂಃ2503/2023

| | | |
|---|---|---|
| ಸಾಕ್ಷಿಯ ಹೆಸರು | ಃ ಪಾಂಡುರಂಗ | ಸಿ.ಡಬ್ಲ್ಯೂ ಃ 01 |
| ತಂದೆ ಹೆಸರು | ಃ ಚೆಲುವಪ್ಪ | ಪಿ.ಡಬ್ಲ್ಯೂ ಃ 01 |
| ವಯಸ್ಸು | ಃ 36 ವರ್ಷ | ಪ್ರಮಾಣೀಕರಿಸಿದ ದಿಃ 28/10/2026 |
| ವೃತ್ತಿ | ಃ ಅಬಕಾರಿ ನಿರೀಕ್ಷಕರು | |
| ವಾಸ | ಃ ಹೊಳೆನರಸೀಪುರ. | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ.ಯವರಿಂದಃ

ನಾನು ಮಾರ್ಚ್ 17 - 2023 ರಿಂದ ಇಲ್ಲಿಯವರೆಗೆ ಹೊಳೆನರಸೀಪುರ ಅಬಕಾರಿ ಇಲಾಖೆಯಲ್ಲಿ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿನಾಂಕ 12.04.2023 ರಂದು ನಾನು ಮತ್ತು ಚಾ ಸಾ 2, ಚಾ ಸಾ 3 ಮತ್ತು ಚಾ ಸಾ 4 ರವರೊಂದಿಗೆ ಮಾಹಿತಿ ಮೇರೆಗೆ ಹೊಳೆನರಸೀಪುರ- ಚನ್ನರಾಯಪಟ್ಟಣದ ಗನ್ನಿಕಡ ಕ್ರಾಸ್ ರಸ್ತೆಯಲ್ಲಿ ಅನುಮಾನಸ್ಪಾದ ವಾಹನ ತಪಾಸಣೆ ಮಾಡುವಾಗ ದೂರದಲ್ಲಿ ಚನ್ನರಾಯಪಟ್ಟಣದ ಕಡೆಯಿಂದ ಬರುತ್ತಿದ್ದ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದ ಅಸಾಮಿಯು ನಮ್ಮನ್ನು ಸುಮಾರು 100 ಅಡಿ ದೂರದಲ್ಲಿ ಅಸಾಮಿ ವಾಹನವನ್ನು ತಿರುಗಿಸಿಕೊಳ್ಳುವಾಗ ನಾವು ಹೋಗಿ ಅಸಾಮಿಯನ್ನು ಹಿಡಿಯಲು ಪ್ರಯತ್ನಿಸಿದಾಗ ಅಸಾಮಿಯು ಗಾಡಿಯನ್ನು ಅಲ್ಲಿಗೆ ನಿಲ್ಲಿಸಿ ಓಡಿ ಪರಾರಿಯಾಗಿರುತ್ತಾನೆ.

2. ನಂತರ ದ್ವಿಚಕ್ರ ವಾಹನವನ್ನು ಪರಿಶೀಲಿಸಿಲಾಗಿ ಅದು ಕೆ ಎ 13 ವೈ 8188 ನೋಂದಣಿಯ ಕಪ್ಪು ಕೆಂಪು ಮತ್ತು ಸಿಲ್ವರ್ ಮಿಶ್ರಿತ ಬಜಾಜ್ ಡಿಸ್ಕವರಿ 100 ಸಿ ಸಿ ವಾಹನ ಆಗಿರುತ್ತದೆ. ನಂತರ ದ್ವಿಚಕ್ರ ವಾಹನದ ಪೇಟ್ರೋಲ್ ಟ್ಯಾಂಕ್ ಮೇಲಿದ್ದ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಲು ಘನ ನ್ಯಾಯಾಲಯದ ವಾರೆಂಟ್ ಇಲ್ಲದ ಕಾರಣ ಕರ್ನಾಟಕ ಅಬಕಾರಿ ಕಾಯಿದೆ ಕಲಂ 54 ರ ಪ್ರಕಾರ ಅಧಿಕಾರವನ್ನು ಬಳಸಿಕೊಂಡು ಸ್ಥಳದಲ್ಲಿಯೇ ಶೋಧನ ವಾರೆಂಟ್ ತಯಾರಿಸಿಕೊಂಡು ಬಿಳಿ ಪ್ಲಾಸ್ಟಿಕಜ್ ಚೀಲವನ್ನು ಕೆಳಗಿಳಸಿ ನೋಡಲಾಗಿ ಮದ್ಯ ತುಂಬಿದ ಟೆಟ್ರಾ ಪ್ಯಾಕಿಟ್ ಗಳು ಕಂಡು ಬಂದಿರುತ್ತವೆ.

3. ಸದರಿ ಚೀಲವನ್ನು ಪರಿಶೀಲಿಸಲಾಗಿ ಅದು ಮದ್ಯ ತುಂಬಿದ ಟೆಟ್ರಾ ಪ್ಯಾಕ್ ಗಳಿಂದ ಕೂಡಿದ್ದು ಅದನ್ನು ಕೆಳಗಿಳಿಸಿ ಸುರಿದು ಟೆಟ್ರಾ ಪ್ಯಾಕೆಟ್ ಗಳನ್ನು ಏಣಿಸಿ ನೋಡಲಾಗಿ ತಲಾ 90 ಮಿಲಿಯ ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಎಂಬ ಲೆಬಲ್ ನಿಂದ ತಲಾ 90 ಮಿಲಿಯ ಒಟ್ಟು 144 ಟೆಟ್ರಾ ಪ್ಯಾಕೆಟ್ ಗಳು ಕಂಡುಬಂದಿರುತ್ತವೆ.

4. ಸದರಿ ಟೆಟ್ರಾ ಪ್ಯಾಕೆಟ್ ಗಳನ್ನು ರಸಾಯನಿಕ ವಿಶ್ಲೇಷಣೆಗಾಗಿ 26 ಟೆಟ್ರಾ ಪ್ಯಾಕೆಟ್ ಗಳನ್ನು ತೆಗೆದು ಬಿಳಿ ಬಣ್ಣದ ಬಟ್ಟೆ ಚೀಲದಲ್ಲಿ ಹಾಕಿ ದಾರದಿಂದ ಕಟ್ಟಿ ಅರಗಿನ ಸಹಾಯದಿಂದ ಇಲಾಖೆಯ ಮುದ್ರೆಯನ್ನು

ಹಾಕಲಾಯಿತು. ನಂತರ ಸ್ಥಳದಲ್ಲಿಯೇ ಮಾದರಿ ಸೀಲೀನ ನಕಲು ಹಾಗೂ ಮಾದರಿ ಚೀಟಿಗಳು ತಯಾರಿಸಿಕೊಂಡು ದೊರೆತ ಮುದ್ದೆ ಮಾಲಿಗೆ ಮತ್ತು ದ್ವಿಚಕ್ರ ವಾಹನಕ್ಕೆ ಅಂಟಿಸಲಾಯಿತು.

5. ಓಡಿ ಹೋದ ಅರೋಪಿ ಬಗ್ಗೆ ಪಂಚರನ್ನು ಕೇಳಲಾಗಿ ಬೆಳಿಗಿನ ಜಾವ ವಾದ್ದರಿಂದ ಆರೋಪಿಯನ್ನು ಗುರುತಿಸಲು ಸಾದ್ಯವಾಗಲಿಲ್ಲ ಎಂದಿರುತ್ತಾರೆ. ನಂತರ ಕೃತ್ಯ ನಡೆದ ಸ್ಥಳ ಚೆಕ್ ಬಂದಿ ನೋಡಲಾಗಿ ಪೂರ್ವಕ್ಕೆ ವಳಂಬಿಗೆ ಗ್ರಾಮಕ್ಕೆ ತೆರಳುವ ರಸ್ತೆ ಪಶ್ಚಿಮಕ್ಕೆ ಹೊಳೆನರಸೀಪುರ ರಸ್ತೆ ಉತ್ತರಕ್ಕೆ ಚನ್ನರಾಯಪಟ್ಟಣ ರಸ್ತೆ ಮತ್ತು ದಕ್ಷಿಣಕ್ಕೆ ರಸ್ತೆ ಬದಿಯ ಸರ್ಕಾರಿ ಜಾಗ ಇರುತ್ತದೆ. ಸದರಿ ಸ್ಥಳ ಪಂಚನಾಮೆಯನ್ನು ಬೆಳಿಗ್ಗೆ 6.30 ರಿಂದ 7.30 ರ ಗಂಟೆಯವರೆಗೆ ಬರೆಯಲಾಗಿರುತ್ತದೆ. ಕಛೇರಿಗೆ ದೂರವಾಣಿ ಮುಖಾಂತರ ತಿಳಿಸಿ ದ್ವಿಚಕ್ರ ವಾಹನದ ಮಾಲೀಕನ ವಿರುದ್ದ ಮೊಕದ್ದಮೆ ದಾಖಲಿಸಲಾಗಿರುತ್ತದೆ.

6. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಸದರಿ ವ್ಯಕ್ತಿಯೇ ಘಟನೆ ದಿನಾ ಸ್ಥಳದಿಂದ ಓಡಿಹೋದ ವ್ಯಕ್ತಿಯೆಂದು ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಬಿಳಿ ಚೀಲ ಮತ್ತು 26 ಟೆಟ್ರಾ ಪ್ಯಾಕೆಟ್ ಗಳನ್ನು ನೋಡಿ ಸದರಿ ಮಾಲೇ ಘಟನೆ ದಿನಾ ತಾವು ವಶಪಡಿಸಿಕೊಂಡು ಮಾಲು ಎಂದು ಗುರುತಿಸಿದ ಮೇರೆಗೆ ಚೀಲವನ್ನು ಮು ಮಾ 1 ಮತ್ತು 26 ಟೆಟ್ರಾ ಪ್ಯಾಕೆಟ್ ಗಳನ್ನು ಒಟ್ಟಾಗಿ 2 ಎಂದು ಗುರುತಿಸಲಾಯಿತು.

7. ಸಾಕ್ಷಿಗೆ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಸ್ಥಳ ಪಂಚನಾಮೆಯ ನಿ ಪಿ 1 ಎಂದು ಸಹಿಯನ್ನು ನಿ ಪಿ 1 (ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಸ್ವತ್ತುಗಳ ಪಟ್ಟಿಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಸ್ಥಳ ಪಂಚನಾಮೆಯ ನಿ ಪಿ 2 ಎಂದು ಸಹಿಯನ್ನು ನಿ ಪಿ 2 (ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಪಿಎಫ್ ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಸ್ಥಳ ಪಂಚನಾಮೆಯ ನಿ ಪಿ 3 ಎಂದು ಸಹಿಯನ್ನು ನಿ ಪಿ 3 (ಎ) ಎಂದು ಗುರುತಿಸಲಾಯಿತು. ಮಾದರಿ ಸೀಲನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ಅವರು ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಅದನ್ನು ನಿ ಪಿ 4 ಮತ್ತು ಸಹಿಯನ್ನು ನಿ ಪಿ 4(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಸ್ವ ದೂರನ್ನು ತೋರಿಸಲಾಗಿ ಅದರಲ್ಲಿ ಅವರು ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಅದನ್ನು ನಿ ಪಿ 5 ಎಂದು ಮತ್ತು ಸಹಿಯನ್ನು ನಿ ಪಿ 5 (ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ರೆಕಾರ್ಡ್ ಆಫ್ ರಿಸನ್ಸ್ ಅನ್ನು ತೋರಿಸಲಾಗಿ ಅದರಲ್ಲಿ ಅವರು ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಅದನ್ನು ನಿ ಪಿ 6 ಎಂದು ಮತ್ತು ಸಹಿಯನ್ನು ನಿ ಪಿ 6 (ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಪಂಚರಿಗೆ ನೀಡಿದ ನೋಟಿಸನ್ನು ತೋರಿಸಲಾಗಿ ಅದರಲ್ಲಿ ಅವರು ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಅದನ್ನು ನಿ ಪಿ 7 ಎಂದು ಮತ್ತು ಸಹಿಯನ್ನು ನಿ ಪಿ 7 (ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಪಂಚರಿಗೆ ನೀಡಿದ ನೋಟಿಸನ್ನು ತೋರಿಸಲಾಗಿ ಅದರಲ್ಲಿ ಅವರು ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಅದನ್ನು ನಿ ಪಿ 8 ಎಂದು ಮತ್ತು ಸಹಿಯನ್ನು ನಿ ಪಿ 8 (ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಯು ಆರ್ ಎಸ್  ವಕೀಲರಿಂದಃ</u>

ನನಗೆ ಬಾತ್ಮಿ ಬಂದಾಗ ನಾನು ನಗರದಲ್ಲಿದ್ದೆ. ಆಗ ಸಮಯ ಬೆಳಿಗ್ಗೆ 5.30 ಗಂಟೆ ಯಾಗಿತ್ತು. ನಾನು ಗಸ್ತಿನಲ್ಲಿದ್ದಸ್ಥಳದಿಂದ ಘಟನ ಸ್ಥಳಕ್ಕೆ ಅಂದಾಜು 10 ಕಿ ಮೀ ಅಂತರವಿದೆ. ನಾನು ಘಟನಾ ಸ್ಥಳಕ್ಕೆ ಹೋದಾಗ ಬೆಳಿಗ್ಗೆ 5.50 ಆಗಿತ್ತು. ನಾನು ಘಟನಾ ಸ್ಥಳದಲ್ಲಿ ಹೊಸ ಬ್ರಿಡ್ಜ್ ನ ಬಳಿ ಜೀಪಿನ ಬಳಿ ನನ್ನ ಸಿಬ್ಬಂದಿಯೊಂದಿಗೆ ನಿಂತಿದ್ದೆ. ಘಟನೆ ಸಮಯವು ವಿಧಾನ ಸಭಾ  ಚುನಾವಣಾ ಸಮಯವಾಗಿದ್ದು ನೀತಿ ಸಂಹಿತೆ ಜಾರಿಯಲ್ಲಿತ್ತು. ಆ ಕಾರಣಕ್ಕೆ ಸ್ಥಳದಲ್ಲಿ ಬ್ಯಾರಿಕೇಡ್ ಇತ್ತು ಎಂದರೆ ನಾನು ಗಮನಿಸಿಲ್ಲ. ನಾನು ನಿಂತು ಕೊಂಡಿದ್ದ ಸ್ಥಳವು ಚನ್ನರಾಯಪಟ್ಟಣ ಹೊಳೆನರಸೀಪುರ ಗಡಿ. ನೀತಿ ಸಂಹಿತೆ  ಕಾರಣ ಅಬಕಾರಿ ಅಧಿಕಾರಿಗಳೊಂದಿಗೆ ಪೊಲೀಸರನ್ನು ನಿಯೋಜಿಸಲಾಗಿತ್ತು ಎಂದರೆ ಸರಿಯಲ್ಲ.

2. ಆರೋಪಿಯು ಬೈಕನ್ನು ನಿಲ್ಲಿಸಿ ರಸ್ತೆಯ ಪಕ್ಕಕ್ಕೆ ಓಡಿಹೋಗಿರುತ್ತಾನೆ. ಆರೋಪಿಯು ಓಡಿ ಹೋಗಲು ಕೇವಲ ಬ್ರಿಡ್ಜ್ ನ ದಾರಿಯೊಂದೇ ಇತ್ತು ಎಂದರೆ ಸರಿಯಲ್ಲ. ಆರೋಪಿಯನ್ನು 100 ಅಡಿ ಅಂತರದಿಂದ ಘಟನಾ ಸ್ಥಳದಿಂದ ಓಡಿಹೋಗುವುದನ್ನು ನೋಡಿರುತ್ತೇನೆ. ನಾನು ನಿ ಪಿ 1 ರಲ್ಲಿ ಆರೋಪಿಯ ಗುರುತಿನ ಬಗ್ಗೆ ಯಾವುದೇ ವಿವರ ನಮೂದಿಸಿಲ್ಲ. ಚಾ ಸಾ 3 ಮತ್ತು ಚಾ ಸಾ 4 ರವರನ್ನು ಮೂಡಲಹಿಪ್ಪೆಯ ಬಳಿಯಿಂದ ಕರೆದು ಕೊಂಡು  ಇಲಾಖಾ ಜೀಪಿನಲ್ಲಿ ಕೂರಿಸಿಕೊಂಡು ಹೋಗುವಾಗ ವಿವರಗಳನ್ನು ತಿಳಿಸಿರುತ್ತೇವೆ. ಚಾ ಸಾ 3 ಮತ್ತು ಚಾ ಸಾ 4 ವಳಂಬಿಕೆ ಗ್ರಾಮದವರು.

3. ನಾವು ಅಮಾನತ್ ಪಡಿಸಿಕೊಂಡ ಸ್ಥಳದ ಬಳಿ ರಸ್ತೆಯ ಬದಿಗೆ ಅಂಗಡಿಗಳಿವೆ.  ನಾವು ಸದರಿ ಅಂಗಡಿಗಳಲ್ಲಿ ಆರೋಪಿಯ ಬಗ್ಗೆ ವಿಚಾರಿಸಿಲ್ಲ ಕಾರಣ ಬೆಳಿಗಿನ ಜಾವವಾದ್ದರಿಂದ ಅಂಗಡಿಗಳು ಮುಚ್ಚಿದ್ದವು. ನಾವು ಮು ಮಾ 1 ಮತ್ತು ಮು ಮಾ 2 ನ್ನು ಹಾಗೂ ದ್ವಿ ಚಕ್ರ ಗಾಡಿಯನ್ನು ಅಮಾನತ್ ಪಡಿಸಿಕೊಳ್ಳುವಾಗ ಪೋಟೋ ವಿಡಿಯೋ ಮಾಡಿದ್ದೇವೆ.  ಅವುಗಳನ್ನು ನಾನು ನ್ಯಾಯಾಲಯಕ್ಕೆ ಹಾಜರಿಸಿಲ್ಲ ಕಾರಣ ತನಿಖಾಧಿಕಾರಿಗಳು ಹಾಜರಿಸುತ್ತಾರೆ.

4. ಸದರಿ ಜಾಗದಲ್ಲಿ ಆರೋಪಿಯದ್ದೇ ಪ್ರಥಮ ವಾಹನವನ್ನು ತಪಾಸಣೆ ಮಾಡಿದ್ದು. ನಾವು ವಶಪಡಿಸಿಕೊಂಡಿದ್ದ 144 ಟೆಟ್ರಾ ಪ್ಯಾಕೆಟ್ ಗಳಲ್ಲಿ ರಸಾಯನಿಕ ಮಾದರಿಗಾಗಿ ತೆಗೆದಿದ್ದ 26 ಟೆಟ್ರಾ ಪ್ಯಾಕೆಟ್ ಗಳನ್ನು ಹೊರತುಪಡಿಸಿ ಇನ್ನುಳಿದ ಟೆಟ್ರಾ ಪ್ಯಾಕೆಟ್ ಗಳನ್ನು ನಾಶಪಡಿಸಲಾಗಿರುತ್ತದೆ. ಆ ಸಂಬಂಧ ತನಿಖಾಧಿಕಾರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರಿಸುತ್ತಾರೆ. ನಿ ಪಿ 1 ನ್ನು ಬರೆದು ಮುಗಿಸಿಕೊಂಡು ನಾವು ಠಾಣೆ ಗೆ ಬಂದಾಗ ಬೆಳಿಗ್ಗೆ 8.00 ಗಂಟೆಯಾಗಿತ್ತು. ಬೆಳಿಗ್ಗೆ 6.30 ಯವರೆಗೆ ನಾವು ಸ್ಥಳದಲ್ಲಿ ಶೋಧನೆ  ಮಾಡಿರುತ್ತೇವೆ. ಪ್ರ. ವ. ವ. ವನ್ನು ದಾಖಲಸಿದ ಸಮಯ ಬೆಳಿಗ್ಗೆ 6.30 ಆಗಿರುತ್ತದೆ. ಪ್ರ. ವ . ವ ದಾಖಲಿಸಲು ಪ್ರತಿ ಅಧಿಕಾರಿಗೆ ಪ್ರತ್ಯೇಕ ಲಾಗಿನ್ ಇರುತ್ತದೆ. ಮು ಮಾ 1 ಮತ್ತು ಮು ಮಾ 2 ಸಾಮಾನ್ಯವಾಗಿ ಎಲ್ಲಾ ಅಂಗಡಿಗಳಲ್ಲಿ ಸಿಗುತ್ತವೆ.

5. ಸದರಿ ರಸ್ತೆಯು ರಾಷ್ಟ್ರಿಯ ಹೆದ್ದಾರಿಯಾದ್ದರಿಂದ ಅಲ್ಲಿರುವ ಅಂಗಡಿಗಳು 24 ಗಂಟೆ ತೆರೆದಿರುತ್ತವೆ, ಮೇಲಾಧಿಕಾರಿಗಳ ಆದೇಶದ ಮೇರೆಗೆ ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ, ಆರೋಪಿಯಿಂದ

ಯಾವುದೇ ಗಾಡಿಯನ್ನು ಅಮಾನತ್ ಪಡಿಸಿಕೊಂಡಿಲ್ಲ, ನಿ ಪಿ 1 ರಿಂದ ನಿ ಪಿ 7 ನ್ನು ಠಾಣೆಯಲ್ಲಿ ಸೃಷ್ಟಿಸಿದ್ದೇವೆ, ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ, ಠಾಣೆಯ ಅಂಕಿ ಅಂಶಗಳಿಗಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ, ಮು ಮಾ 1 ಮತ್ತು ಮು ಮಾ 2 ಆರೋಪಿಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಮುಕ್ತಾಯಃ</u>

<u>ಮರು ವಿಚಾರಣೆ ಇಲ್ಲಃ</u>

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,
ಹೊಳೆನರಸೀಪುರ